<u>1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ</u>

<u>Spl.C.150/2023</u>

ದಿಃ 06.07.2024
(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

Cw-3 Pw-3

| | | |
|---|---|---|
| ಹೆಸರು | ಃ | ಶಿವಣ್ಣ |
| ತಂದೆಯ ಹೆಸರು | ಃ | ಮುನಿದಾಸಯ್ಯ ಉಃ ಮುನಿದಾಸಯ್ಯ |
| ವಯಸ್ಸು | ಃ | 45 ವರ್ಷ |
| ಉದ್ಯೋಗ | ಃ | ಕೂಲಿ ಕೆಲಸ |
| ವಾಸಸ್ಥಳ | ಃ | ವಾಡೆದೊಡ್ಡಿ |

<u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>

1. ಚಾಸಾ.1 ನನ್ನ ತಾಯಿ.

2. ಚಾಸಾ.2 ನನ್ನ ತಮ್ಮ.

3. ನಾವು ಪರಿಶಿಷ್ಟ ಪಂಗಡಕ್ಕೆ ಸೇರಿದ ಹಿಂದೂ ಕೊರಮ ಜಾತಿಗೆ ಸೇರಿದವರಾಗಿರುತ್ತೇವೆ.

4. ಈಗ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿ ಹಿಂದೂ ಕುರುಬ ಸಮುದಾಯಕ್ಕೆ ಸೇರಿದವರಾಗಿದ್ದು ನನಗೆ ಗೊತ್ತು.

5. ಆರೋಪಿತನಿಗೆ ನಮ್ಮ ಜಾತಿ ಗೊತ್ತು.

6. ಈಗ ಸುಮಾರು 10 ತಿಂಗಳುಗಳ ಹಿಂದೆ ಒಂದು ದಿನ ಬೆಳಿಗ್ಗೆ ಸುಮಾರು 10.00-10.30 ಗಂಟೆ ಸಮಯದಲ್ಲಿ ಚಾಸಾ.2 ಈತನಿಗೆ ಚಾಸಾ.1 ಇವಳು ಬೆಳಗ್ಗಿನ ತಿಂಡಿ ಮಾಡಿಸಲೆಂದು ಕೈ

ಹಿಡಿದುಕೊಂಡು ಹೋಗುತ್ತಿದ್ದಾಗ ಆರೋಪಿತನು ಹಿಂದಿನಿಂದ ಒಮ್ಮಿಂದೊಮ್ಮೆಲೆ ದ್ವಿಚಕ್ರ ವಾಹನವನ್ನು ತೆಗೆದುಕೊಂಡು ಬಂದು ಚಾಸಾ.1 ಇವಳಿಗೆ ಡಿಕ್ಕಿ ಹೊಡೆದಿರುತ್ತಾನೆ.

7. ಅದಕ್ಕೆ ಆರೋಪಿತನಿಗೆ ಕೇಳಲು, ಆತನು ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆ.

8. ಅದೂ ಅಲ್ಲದೇ ಚಾಸಾ.2 ಈತನಿಗೆ ಆರೋಪಿತನು ತನ್ನ ಕೈ ಮುಷ್ಠಿಯಿಂದ ಬಲಗೆನ್ನೆಗೆ ಗುದ್ದಿರುತ್ತಾನೆ.

9. ಅದರಂತೆ ನನ್ನ ತಾಯಿಯಾದ ಚಾಸಾ.1 ಇವಳಿಗೂ ಸಹ ಹೊಡೆದಿರುತ್ತಾನೆ.

10. ಆರೋಪಿತನು ಅವಾಚ್ಯ ಶಬ್ದಗಳಿಂದ ಬೈದಿದ್ದಲ್ಲದೇ, ನಮ್ಮ ಶೆಡ್ಡಿಗೆ ಬೆಂಕಿ ಹಾಕುತ್ತೇನೆ ಎಂದೂ ಸಹ ಬೆದರಿಕೆ ಹಾಕಿರುತ್ತಾನೆ.

<u>ಪಾಟೀ ಸವಾಲುಃ ಶ್ರೀ. ಡಿ.ಆರ್.ಜೆ., ವಕೀಲರಿಂದ ಆರೋಪಿಯ ಪರವಾಗಿಃ</u>

11. ಆರೋಪಿತನ ಸದರಿ ದ್ವಿಚಕ್ರ ವಾಹನ ಸಂಖ್ಯೆ.1102 ಎಂದು ಇರುತ್ತದೆ.

12. ಘಟನೆಯ ಸಮಯದಲ್ಲಿ ನಾನು ಮನೆಯ ಒಳಗೆ ಇದ್ದೆನು.

13. ನನ್ನ ತಾಯಿ ಸದ್ದು ಮಾಡಿದಾಗಲೇ ನಾನು ಹೊರಗಡೆ ಬಂದಿರುತ್ತೇನೆ.

14. ನನ್ನ ತಾಯಿಗೆ ಆರೋಪಿತನು ದ್ವಿಚಕ್ರ ವಾಹನದಿಂದ ಗುದ್ದಿರುವುದಿಲ್ಲ ಮತ್ತು ನನ್ನ ತಮ್ಮ ಚಾಸಾ.2 ಈತನ ಕೆನ್ನೆಗೆ ಕೈ ಮುಷ್ಟಿಯಿಂದ ಗುದ್ದಿರುವುದಿಲ್ಲವಾದರೂ ಸಹ, ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

15. ಅದರಂತೆ, ಆರೋಪಿತನು ನಮ್ಮ ಶೆಡ್ಡಿಗೆ ಬೆಂಕಿ ಹಾಕುತ್ತೇನೆ ಎಂದು ಬೆದರಿಕೆ ಹಾಕಿರುತ್ತಾನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

16. ಸರ್ಕಾರದಿಂದ ಹಣ ಬಂದಿರುತ್ತದೆ ಆದರೆ ಎಷ್ಟು ಎಂದು ನನಗ ಗೊತ್ತಿಲ್ಲ.

17. ಸರ್ಕಾರದಿಂದ ಹಣವನ್ನು ಪಡೆಯುವ ಉದ್ದೇಶಂದಿದಲೇ ಈ ರೀತಿ ಸುಳ್ಳು ಪ್ರಕರಣ ಹೂಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಮರುವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಜಿ ಡಿ ಮಹಾವರ್ಕರ್)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.